# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 439

ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 13-08-2025.

ಉತ್ತರಿಸುವ ಸಚಿವರು : ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಯಾವ ಯಾವ ಯೋಜನೆಯಡಿ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಲಾಗಿದೆ; (ಮಾಹಿತಿ ಒದಗಿಸುವುದು)</td><td>ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ವಿವಿಧ ಯೋಜನೆಗಳಡಿ ಒದಗಿಸುತ್ತಿರುವ ಸೌಲಭ್ಯಗಳ ವಿವರವನ್ನು "ಅನುಬಂಧ-ಅ" ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>2023-24ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಸರ್ಕಾರ ನೀಡಿರುವ ವರ್ಷಾವಾರು, ಯೋಜನೆವಾರು ಗುರಿ, ಸಾಧನೆ ಹಾಗೂ ಬಾಕಿಯಿರುವ ವಿವರಗಳನ್ನು ಒದಗಿಸುವುದು;</td><td>ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕೊಪ್ಪಳ ಜಿಲ್ಲೆಗೆ 2023-24 ಹಾಗೂ 2024-25 ನೇ ಸಾಲಿಗೆ ನೀಡಿರುವ ವರ್ಷವಾರು, ಯೋಜನೆವಾರು ಗುರಿ, ಸಾಧನೆ ಹಾಗೂ ಬಾಕಿಯಿರುವ ವಿವರಗಳನ್ನು "ಅನುಬಂಧ-ಆ" ರಲ್ಲಿ ನೀಡಲಾಗಿದೆ.<br><br>2025-26ನೇ ಸಾಲಿಗೆ ಸಂಬಂಧಿಸಿದಂತೆ ವಿವಿಧ ಯೋಜನೆಗಳಡಿ ಜಿಲ್ಲೆಗಳಿಗೆ ಯೋಜನೆವಾರು ಗುರಿ ನಿಗದಿಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.</td></tr>
<tr><td>ಇ)</td><td>ಈ ಜಿಲ್ಲೆಯಲ್ಲಿ ಅರ್ಜಿಗಳನ್ನು ಬಾಕಿ ಉಳಿಸಿಕೊಳ್ಳಲು ಕಾರಣವೇನು; ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಯಾವ ರೀತಿಯ ಶಿಸ್ತು ಕ್ರಮ ಜರುಗಿಸಲಾಗಿದೆ; (ಮಾಹಿತಿ ಒದಗಿಸುವುದು)</td><td>ಉದ್ಭವಿಸುವುದಿಲ್ಲ.</td></tr>
<tr><td>ಈ)</td><td>ಕೊಪ್ಪಳ ಜಿಲ್ಲೆಗೆ 2023-24ನೇ ಸಾಲಿನಿಂದ ಗುರಿಗೆ ಅನುಗುಣವಾಗಿ ಇಲ್ಲಿಯವರೆಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದೆಯೇ;<br>ಹೌದಾದಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ; ಸದರಿ ಅನುದಾನದಿಂದ ಎಷ್ಟು ಜನ ಫಲಾನುಭವಿಗಳಿಗೆ ಪ್ರಯೋಜನವಾಗಿದೆ; (ಮಾಹಿತಿ ಒದಗಿಸುವುದು)</td><td>ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೊಪ್ಪಳ ಜಿಲ್ಲೆಗೆ 2023-24 ಮತ್ತು 2024-25ನೇ ಸಾಲಿಗೆ ಗುರಿಗೆ ಅನುಗುಣವಾಗಿ ಬಿಡುಗಡೆಯಾದ ಅನುದಾನ ಮತ್ತು ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆಯ ವಿವರ ಈ ಕೆಳಕಂಡಂತಿದೆ.<br><br>
<table>
<tr><th>ಕ್ರ.ಸಂ.</th><th>ವರ್ಷ</th><th>ಬಿಡುಗಡೆಯಾದ ಒಟ್ಟು ಅನುದಾನ (ರೂ.ಲಕ್ಷಗಳಲ್ಲಿ)</th><th>ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ</th></tr>
<tr><td>1</td><td>2023-24</td><td>235.20</td><td>252</td></tr>
<tr><td>2</td><td>2024-25</td><td>148.57</td><td>155</td></tr>
</table></td></tr>
<tr><td>ಉ)</td><td>ಇಲ್ಲವಾದಲ್ಲಿ ಬಿಡುಗಡೆಯಾಗದಿರಲು ಕಾರಣವೇನು; ಫಲಾನುಭವಿಗಳ ಆಯ್ಕೆಯಾಗಿ ಅವರಿಗೆ ಯೋಜನೆ ತಲುಪಿಲ್ಲವೆಂದರೆ ನಿಷ್ಪ್ರಯೋಜನಕಾರಿಯಲ್ಲವೇ; ಇದಕ್ಕೆ ಯಾರು ಹೊಣೆಗಾರರು ಹಾಗೂ ಸರ್ಕಾರದ ನಿಲುವೇನು?</td><td>ಉದ್ಭವಿಸುವುದಿಲ್ಲ.</td></tr>
</table>

**ಸಂಖ್ಯೆ:MWD 140 LMQ 2025**

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

Q. No 439

**ಅನುಬಂಧ - 'ಅ'**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ. ಕೊಪ್ಪಳ ಜಿಲ್ಲೆ
ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀಮತಿ ಹೇಮಲತಾ ನಾಯಕ್
(ಕೊಪ್ಪಳ) ಪ್ರಶ್ನೆ ಸಂ. 439 ಕ್ಕೆ ಉತ್ತರ

**1. ಅರಿವು (ವಿಧ್ಯಾಭ್ಯಾಸ ಸಾಲ) ಯೋಜನೆ**

ಈ ಯೋಜನೆಯಡಿಯಲ್ಲಿ ವೃತ್ತಿಪರ ಶಿಕ್ಷಣ ಅಂದರೆ MBBS, MD, MS, BE, B. Tech, M.E, M.Tech, BDS, MDS, B.Ayush, M.Ayush, MBA, MCA, LLB, B.Arch, M.Arch ಕೋರ್ಸ್ ಮಾಡಬಯಸುವ ಅಲ್ಪಸಂಖ್ಯಾತ ವಿಧ್ಯಾರ್ಥಿಗಳಿಗೆ ಅವರು ವ್ಯಾಸಂಗ ಪೂರ್ಣಗೊಳಿಸುವವರಿಗೆ ಪ್ರತಿ ವರ್ಷಕ್ಕೆ ರೂ.50,000/-ದಿಂದ ರೂ.5,00,000/- ವರೆಗೆ ಸಾಲವನ್ನು ಮಂಜೂರು ಮಾಡಲಾಗುತ್ತದೆ.

**2. ಸ್ವಾವಲಂಬಿ ಸಾರಥಿ ಯೋಜನೆ (ಟ್ಯಾಕ್ಸಿ /ಗೂಡ್ಸ್ /ಪ್ಯಾಸೆಂಜರ್ ಆಟೋರಿಕ್ಷಾ ವಾಹನ ಖರೀದಿಸಲು ಸಹಾಯಧನ ಯೋಜನೆ)**

ಈ ಯೋಜನೆಯನ್ನು ನಿಗಮದ ವತಿಯಿಂದ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ಗಳ ಆರ್.ಬಿ.ಐ ನಿಂದ ಮಾನ್ಯತೆ ಪಡೆದ ವಿವಿಧ ಫೈನಾನ್ಸ್ ಸಂಸ್ಥೆಗಳು (ಫೈನಾನ್ಸ್ ಕಂಪನೀಸ್ /ಕೊ-ಆಪರೇಟೀವ್ ಬ್ಯಾಂಕ್ / ಸೊಸೈಟೀಸ್) ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳು/ಷೆಡ್ಯೈಲ್ ಬ್ಯಾಂಕ್ ಆರ್.ಬಿ.ಐ ನಿಂದ ಮಾನ್ಯತೆ ಪಡೆದ ವಿವಿಧ ಫೈನಾನ್ಸ್ ಸಂಸ್ಥೆಗಳು (finance companies) co-operative bank/societies ಸಾಲ ಮಂಜೂರಾತಿ ನೀಡಿದ ಫಲಾನುಭವಿಗಳಿಗೆ ಪ್ಯಾಸೆಂಜರ್ ಆಟೋರಿಕ್ಷಾ/ಗೂಡ್ಸ್ ವಾಹನ/ಟ್ಯಾಕ್ಸಿ ಖರೀದಿಸಲು ವಾಹನದ on road price ಮೇಲೆ ಕನಿಷ್ಠ ಶೇ.50 ರಷ್ಟು ಸಹಾಯಧನ ಗರಿಷ್ಠ ರೂ.3.00 ಲಕ್ಷ ( ಪ್ಯಾಸೆಂಜರ್ ಅಟೋರಿಕ್ಷಾಗೆ ಗರಿಷ್ಠರೂ.75000/)) ಸಹಾಯಧನವನ್ನು ನೀಡಲಾಗುವುದು.

**3. ಶ್ರಮಶಕ್ತಿ ಯೋಜನೆ:**

ಈ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತ ವರ್ಗದ ಕುಲಕಸುಬುದಾರರಿಗೆ ತರಬೇತಿ ನೀಡಿ, ಅವರು ತಮ್ಮ ಕಲಾತ್ಮಕ ಮತ್ತು ತಾಂತ್ರಿಕ ಕೌಶಲ್ಯವನ್ನು ವೃದ್ಧಿಸಿಕೊಂಡು ಅದೇ ಕಸುಬನ್ನು ಮುಂದುವರೆಸಲು ಅಥವಾ ಸಣ್ಣ ವ್ಯಾಪಾರವನ್ನು ಪ್ರಾರಂಭಿಸಲು ಅಥವಾ ಅಭಿವೃದ್ಧಿಗೊಳಿಸುವ ಸಲುವಾಗಿ, ನಿಗಮದಿಂದ ಕಡಿಮೆ ಬಡ್ಡಿದರದಲ್ಲಿ ರೂ.50,000/- ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ. ಇದರಲ್ಲಿ ಶೇ.50 ರಷ್ಟು ಸಾಲವನ್ನು ಮತ್ತು ಶೇ.50 ರಷ್ಟು ಸಹಾಯಧನವಾಗಿರುತ್ತದೆ.

**4. ಶ್ರಮಶಕ್ತಿ ವಿಶೇಷ ಮಹಿಳಾ ಯೋಜನೆ:**

ಅಲ್ಪಸಂಖ್ಯಾತ ಸಮುದಾಯದ ವಿಧವೆ/ವಿಚ್ಛೇದಿತ/ಅವಿವಾಹಿತ ಮಹಿಳೆಯರಿಗೆ ಆರ್ಥಿಕ ಸಬಲೀಕರಣಕ್ಕಾಗಿ ವಿಶೇಷ ಯೋಜನೆಯಾಗಿದೆ.ಯೋಜನೆಯಡಿ ರೂ.25,000/-ಸಾಲ ಮತ್ತು ರೂ.25,000/- ಸಹಾಯಧನ ಸೇರಿ ಕನಿಷ್ಠ ಒಟ್ಟು ರೂ.50,000/- ಕಡಿಮೆ ಇಲ್ಲದಂತೆ ಸಾಲ ಮತ್ತು ಸಹಾಯಧನವನ್ನು ವಿವಿಧ ಆರ್ಥಿಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಒದಗಿಸಲಾಗುವುದು. ಪ್ರತಿ ಫಲಾನುಭವಿಗೆ ರೂ.50,000/- ಸಾಲ ಮತ್ತು ಸಹಾಯಧನ ಮೊತ್ತ ನಿಗದಿಪಡಿಸಲಾಗಿದ್ದು ಯಾವುದೇ ಕಾರಣಕ್ಕೂ ಸಾಲ ಮತ್ತು ಸಹಾಯಧನ ಮೊತ್ತವನ್ನು ನಿಗದಿಪಡಿಸಿರುವ ಮೊತ್ತಕ್ಕಿಂತ ಕಡಿಮೆ ಮಾಡಬಾರದು.

**5.ವೃತ್ತಿ ಪ್ರೋತ್ಸಾಹ ಯೋಜನೆ:**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಈ ಹಿಂದೆ ಅನುಷ್ಠಾನಗೊಳ್ಳುತ್ತಿದ್ದ ವೃತ್ತಿ ಪ್ರೋತ್ಸಾಹ ಮತ್ತು ಸ್ವಯಂ ಉದ್ಯೋಗ ಯೋಜನೆಗಳೆರಡನ್ನು ವಿಲೀನಗೊಳಿಸಿ "ವೃತ್ತಿ ಪ್ರೋತ್ಸಾಹ ಯೋಜನೆ" ಎಂದು 2020-21 ನೇ ಸಾಲಿಗೆ ಅನ್ವಯವಾಗುವಂತೆ ಬ್ಯಾಂಕ್ ಸಾಲದ ಬದಲಾಗಿ ಕೆ.ಎಂ.ಡಿ.ಸಿ ನಿಗಮದ ವತಿಯಿಂದಲೇ ಒಟ್ಟು ಸಾಲದ ಮೊತ್ತ ರೂ.1.00 ಲಕ್ಷ (ಒಂದು ಲಕ್ಷ ರೂಪಾಯಿಗಳು) ಅದರಲ್ಲಿ ಶೇ.50ರಷ್ಟು ಸಾಲ, ಶೇ.50 ರಷ್ಟು ಸಹಾಯಧನ ದೊಂದಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

**6. ಗಂಗಾ ಕಲ್ಯಾಣ ಯೋಜನೆ:**

ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಕೊಳವೆಬಾವಿಯನ್ನು ಕೊರೆದು,ಪಂಪ್ ಮೋಟಾರ್ ಹಾಗೂ ವಿದ್ಯುದೀಕರಣ ಮಾಡಿ ನೀರನ್ನು ಒದಗಿಸಲಾಗುತ್ತದೆ. ಈ ಯೋಜನೆಯು ಸಂಪೂರ್ಣ ಸಹಾಯಧನ ಯೋಜನೆಯಾಗಿದೆ. ವೈಯಕ್ತಿಕ ಕೊಳವೆ ಬಾವಿ ಯೋಜನೆಗೆ ಸರ್ಕಾರವು ರೂ.4.00ಲಕ್ಷಗಳನ್ನು 1.ಬೆಂಗಳೂರು ಗ್ರಾಮಾಂತರ 2.ಕೋಲಾರ, 3.ಚಿಕ್ಕಬಳ್ಳಾಪುರ, 4.ರಾಮನಗರ ಮತ್ತು 5.ತುಮಕೂರು ಜಿಲ್ಲೆಗಳಿಗೆ ನಿಗದಿಪಡಿಸಿರುತ್ತದೆ ಮತ್ತು ಇತರೆ ಜಿಲ್ಲೆಗಳಿಗೆ ರೂ.3.00 ಲಕ್ಷಗಳನ್ನು ನಿಗದಿಪಡಿಸಿರುತ್ತದೆ.

MANAGING DIRECTOR
KARNATAKA MINORITIES DEVELOPMENT
CORPORATION LIMITED
BENGALURU

ಅನುಬಂಧ-'೪'

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,(ನಿ) ಕೊಪ್ಪಳ ಜಿಲ್ಲೆ

## 2023-24 ನೇ ಸಾಲಿನಲ್ಲಿ ನಿಗಮದ ವಿವಿಧ ಯೋಜನೆಗಳಲ್ಲಿ ವಿಧಾನಸಭಾ ಕ್ಷೇತ್ರವಾರು ನಿಗಧಿಪಡಿಸಿದ ಗುರಿ

| ಜಿಲ್ಲೆಯ ಗುರಿ | ಶ್ರಮಶಕ್ತಿ ಸಾಲ | | ಶ್ರಮಶಕ್ತಿ ವಿಶೇಷ ಮಹಿಳೆ | | ವೃತ್ತಿ ಪ್ರೋತ್ಸಾಹ ಯೋಜನೆ | | ಗಂಗಾಕಲ್ಯಾಣ ಯೋಜನೆ | | ಸ್ವಾವಲಂಭಿ ಸಾರಥಿ ಯೋಜನೆ | | ಒಟ್ಟು ಸೇರಿ | | ಸಾಧನೆ | | ಅರಿವು ಸಾಧನೆ | |
|---|---|---|---|---|---|---|---|---|---|---|---|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | | | | |
| ಕೊಪ್ಪಳ ಜಿಲ್ಲೆ | 14 | 7.00 | 16 | 8.00 | 14 | 14.00 | 13 | 39.00 | 5 | 15.00 | 62 | 83.00 | | | | |
| ವಿಧಾನ ಸಭಾ ಕ್ಷೇತ್ರಗಳು | ಶ್ರಮಶಕ್ತಿ ಸಾಲ | | ಶ್ರಮಶಕ್ತಿ ವಿಶೇಷ ಮಹಿಳೆ | | ವೃತ್ತಿ ಪ್ರೋತ್ಸಾಹ ಯೋಜನೆ | | ಗಂಗಾಕಲ್ಯಾಣ ಯೋಜನೆ | | ಸ್ವಾವಲಂಭಿ ಸಾರಥಿ ಯೋಜನೆ | | ಒಟ್ಟು ಸೇರಿ | | | | | |
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಗಂಗಾವತಿ | 4 | 2.00 | 4 | 2.00 | 4 | 4.00 | 3 | 9.00 | 1 | 3.00 | 16 | 20.00 | 16 | 20.00 | 77 | 49.25 |
| ಕೊಪ್ಪಳ | 3 | 1.50 | 3 | 1.50 | 3 | 3.00 | 3 | 9.00 | 1 | 3.00 | 13 | 18.00 | 13 , | 18.00 | 66 | 48.93 |
| ಕನಕಗಿರಿ | 3 | 1.50 | 3 | 1.50 | 3 | 3.00 | 3 | 9.00 | 1 | 3.00 | 13 | 18.00 | 13 | 18.00 | 13 | 11.29 |
| ಕುಷ್ಟಗಿ | 2 | 1.00 | 3 | 1.50 | 2 | 2.00 | 2 | 6.00 | 1 | 3.00 | 10 | 13.50 | 10 | 13.50 | 15 | 29.72 |
| ಯಲಬುರ್ಗಾ | 2 | 1.00 | 3 | 1.50 | 2 | 2.00 | 2 | 6.00 | 1 | 3.00 | 10 | 13.50 | 10 | 13.50 | 19 | 12.83 |
| ಒಟ್ಟು | 14 | 7.00 | 16 | 8.00 | 14.00 | 14.00 | 13.00 | 39.00 | 5 | 15.00 | 62 | 83.00 | 62 | 83.00 | 190 | 152.02 |

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,(ನಿ) ಕೊಪ್ಪಳ ಜಿಲ್ಲೆ
## 2024–25 ನೇ ಸಾಲಿನಲ್ಲಿ ನಿಗಮದ ವಿವಿಧ ಯೋಜನೆಗಳಲ್ಲಿ ವಿಧಾನಸಭಾ ಕ್ಷೇತ್ರವಾರು ನಿಗಧಿಪಡಿಸಿದ ಗುರಿ

| ಕೊಪ್ಪಳ ಜಿಲ್ಲೆ | ಶ್ರಮಶಕ್ತಿ ಯೋಜನೆ | | ಶ್ರಮಶಕ್ತಿ (ವಿಶೇಷ ಮಹಿಳಾ ಯೋಜನೆ) | | ವೃತ್ತಿ ಪ್ರೋತ್ಸಾಹ ಯೋಜನೆ | | ಸ್ವಾವಲಂಭಿ ಸಾರಥಿ ಯೋಜನೆ | | ಸಿಕ್ಕಲಿಗಾರ ಸಮುದಾಯದ ಅಭಿವೃದ್ಧಿ ಯೋಜನೆ | | ಒಟ್ಟು | | ಸಾಧನೆ | | ಅರಿವು ಸಾಧನೆ | |
|---|---|---|---|---|---|---|---|---|---|---|---|---|---|---|---|---|
| ಜಿಲ್ಲೆಯ ಗುರಿ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| | 28 | 14.00 | 16 | 8.00 | 28 | 28.00 | 14 | 42.00 | 1 | 1.00 | 72 | 50.00 | 87 | 93.00 | 68 | 55.57 |
| ವಿಧಾನ ಸಭಾ ಕ್ಷೇತ್ರಗಳು | | | | | | | | | | | | | | | | |
| ಗಂಗಾವತಿ | 7 | 3.50 | 4 | 2.00 | 7 | 7.00 | 3 | 9.00 | | | 18 | 12.50 | 21 | 21.50 | 34 | 29.85 |
| ಕೊಪ್ಪಳ | 6 | 3.00 | 3 | 1.50 | 6 | 6.00 | 3 | 9.00 | | | 15 | 10.50 | 19 | 20.50 | 13 | 15.32 |
| ಕನಕಗಿರಿ | 5 | 2.50 | 3 | 1.50 | 5 | 5.00 | 3 | 9.00 | 1 | 1.00 | 13 | 9.00 | 16 | 18.00 | 9 | 5.00 |
| ಕುಷ್ಟಗಿ | 5 | 2.50 | 3 | 1.50 | 5 | 5.00 | 3 | 9.00 | | | 13 | 9.00 | 16 | 18.00 | 5 | 1.85 |
| ಯಲಬುರ್ಗಾ | 5 | 2.50 | 3 | 1.50 | 5 | 5.00 | 2 | 6.00 | | | 13 | 9.00 | 15 | 15.00 | 7 | 3.55 |
| ಒಟ್ಟು | 28 | 14.00 | 16 | 8.00 | 28 | 28.00 | 14.00 | 42.00 | 1.00 | 1.00 | 72 | 50.00 | 87 | 93.00 | 68 | 55.57 |